ನಡೆಯುತ್ತಾ ಇರತಕ್ಕದ್ದಾ ನಿಮ್ಮ ಕಣ್ಣಿಗೆ ಭರುತ್ತಾ ಇಲ್ಲ. ಸರ್ಕಾರದವರಂ ಅನೇಕ ಕಾರ್ಯಕ್ರಮ ಗಳನ್ನು ಹಾಕಿಕೊಂಡು ಆಡಳಿತದಲ್ಲಿ ಸ್ವಚ್ಛವಾಗಿ ಇಡುವುದಕ್ಕೆ ಅನೇಕ ಕಾರ್ಯಗಳನ್ನು ಮಾಡಿದ್ದಾರೆ ಬಡವರನ್ನು ಉದ್ಧಾರ ಮಾಡುವುದಕ್ಕೆ ಸಾಕಾದಷ್ಟು ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿ ನಿಂ ಅಂಶ ಕಾರ್ಯಕ್ರಮವೇನಿದೆಯೋ ಅದರ ಬಗ್ಗೆ ಸಾಕಷ್ಟು ಆಸಕ್ತಿಯನ್ನು ವಹಿಸಬೇಕೆಂದು ಸರ್ಕಾರದವರಂ ಈ ಮೂಲಕ ಒತ್ತಾಯಃ ಮಾಡುತ್ತೇನೆ. ಇದಂ ಅನೇಕ ಸಂದರ್ಭದಲ್ಲಿ ದುರುಪಯೋಗವಾಗುತ್ತಾ ಇದೆ. ಪೆಡ್ಯೂಲ್ ಕ್ಯಾಸ್ಟ್ ಮತ್ತು ಪೆಡ್ಯೂಲ್ ಟ್ರೈಬ್ಸ್ ಜನಾಂಗಕ್ಕೆ ಒದಗಿಸುತ್ತಿರತಕ್ಕ ಹಣ ಸರಿಯಾದ ರೀತಿಯಲ್ಲಿ ಖರ್ಚಾಗುತ್ತಾ ಇಲ್ಲ ಎಂದಂ ಅನೇಕರು ಹೇಳುತ್ತಿದ್ದಾರೆ, ಹೀಗೆ ಇರತಕ್ಕ ಸಂದರ್ಭದಲ್ಲಿ ಈಗಿನ ಎಮರ್ಜನ್ಸಿ ಇರತಕ್ಕ ಕಾಲದಲ್ಲಿ ಅನೇಕರು ಇದನ್ನು ದುರುಪಯೋಗಪಡಿಸಿ ಕೊಳ್ಳತಕ್ಕ ಅವಕಾಶಗಳು ಇವೆ. ಈಗ ಇರತಕ್ಕ ವಿಜಿಲೆನ್ಸ್ ಕಮಿಷನ್ ವ್ಯಾಪ್ತಿ ಇಷ್ಟು ಹೆಚ್ಚು ಇಲ್ಲದೆ ಲೋಕಪಾಲ ಮತ್ತು ಲೋಕ ಆಯೋಗ ರಚನೆ ಆಗುವುದು ಮುಂದು ಮುಂದೆ ಹೊಗುತ್ತಿರುವುದರಿಂವು ಈ ಮೂಲ ಕಾರಣವನ್ನು ಕಂಡುಹಿಡಿಯತಕ್ಕಂದ್ದರ ಅವಶ್ಯಕತೆ ಇದೆ.

ಶ್ರೀ ಎಚ್. ಎಂ. ಚನ್ನಬಸಪ್ಪ —ಮೂಲ ಕಾರಣ ಎಂದರೆ ಅದು ಯಾವುದು?

ಶ್ರೀ ಟಿ. ಆರ್. ಶಾಮಣ್ಣ.—ತಮಗೆ ಗೊತ್ತಿರುವಹಾಗೆ ಹಣವನ್ನು ದುಂಡಿಯಂದೆಯೇ ಇರತಕ್ಕ ಕಾಲದಲ್ಲಿ ಗಳಿಸಿಕೊಳ್ಳಬೇಕೆನ್ನತಕ್ಕುಂಥಾದ್ದು.

ಶ್ರೀ ಕೋಣಂದೂರು ಲಿಂಗಪ್ಪ.—ಕಡಿಮೆ ಮಾತು ಅಡಿ ಹೆಚ್ಚು ದುಡಿಮೆ ಮಾಡಿ ಎಂದು ಎಲ್ಲ ಕಡೆ ಬೋರ್ಡ್ ಇದೆ.

SRI H. M. CHANNABASAPPA.—I can understand the Hon'ble Member saying that these institutions must be strengthened and make them to work more effectively. I cannot understand Hon'ble Member suggesting appointment of Judicial Commission to probe into reasons why there should be corruption.

ಶ್ರೀ ಟಿ. ಆರ್. ಶಾಮಣ್ಣ.—ಈಗ ಇರತಕ್ಕ ವಾತಾವರಣವನ್ನು ನೋಡಿದರೆ ಕಾರ್ಪೋರೇಷನ್ ನಲ್ಲಿ ಎಸ್ಟಾಬ್ಲಿಷ್‌ಮೆಂಟ್‌ಗೆ ಹೆಚ್ಚು ಹೆಚ್ಚು ಖರ್ಚಾಗುತ್ತಿದೆ ಅದಕ್ಕೆ ತಕ್ಕಂಥ ಹೆಚ್ಚಿನ ಕೆಲಸವೂ ಕೂಡ ಆಗಬೇಕಾಗಿದೆ. ತೆರಿಗೆದಾರರು ಕೊಟ್ಟ ಹಣ ಸದುಪಯೋಗವಾಗಬೇಕು ಈಗ ಇರತಕ್ಕ ಪರಿಸ್ಥಿತಿ ಯನ್ನು ನೋಡಿದರೆ ಲಂಚಬರುತ್ತಿರಲಿ; ಕೆಲಸ ನಡೆಯುತ್ತಿರಲಿ, ನಿರ್ಣಯ ಬೇಡ ಎನ್ನುವ ಈ ವನೋಭಾವ ಹೋಗಬೇಕೆಂದು ಹೇಳುತ್ತಾ ನನ್ನ ಅಭಿಪ್ರಾಯದಲ್ಲಿ ಈ ನಿರ್ಣಯವನ್ನು ಒಪ್ಪಿ ಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

MR. DEPUTY SPEAKER.—I will put the Resolution to the vote of the House.

The question is.

"That this Assembly recommends to Government to appoint a Judicial Commission to examine and submit a report as to how best corruption could be checked at all levels in Government. Semi-Government and Public Utility Concerns and how the efficiency could be increased to enable public to get their grievances redressed promptly and in just and equitable manner."

The resolution was negatived

(*ii*) *re: Providing Perennial Water Supply to the Lift Irrigation Scheme along the Bhima river.*

ಶ್ರೀ ಜಿ. ಎಸ್. ಕಲಾಡಿ (ಬಿಳ್ಕೋಳಿ). —ಅಧ್ಯಕ್ಷರೇ ನಾನು ನಿರ್ಣಯವನ್ನು ಮಂಂಡಿಸುತ್ತೇನೆ. ನಿರ್ಣಯ ಈ ರೀತಿ ಇದೆ.—

ಭೀಮನದಿಗೆ ಉಜನಿ ಹತ್ತಿರ ಅಡ್ಡಲಾಗಿ ಸೇತುವೆಯನ್ನು ಮಹರಾಷ್ಟ್ರ ಸರ್ಕಾರದವರಂ ನಿರ್ಮಿಸಿರುವುದರಿಂದ ಇಂಡಿ, ಸಿಂದಗಿ ತಾಲ್ಲೂಕುಗಳಲ್ಲಿ ಭೀಮಾನದಿಗಿಂಂಟ ಪೂರ್ತಿಯಾಗಿರುವ ಮತ್ತೆ, ಪೂರ್ತಿ ಆಗದೆ ಇರುವ ಯಾತ ನೀರಾವರಿ ಯೋಜನೆಗಳು ಪೂರ್ತಿ ನಿಷ್ಪ್ರಯೋಜಕವಾಗಂತ್ತಿದೆ. ಅದರ ಬಗ್ಗೆ ಸರ್ಕಾರವು ತೀವ್ರ ಕ್ರಮಕ್ಕೈಗೊಳ್ಳುವುದರ ಜೊತೆಗೆ ಕೇಂದ್ರ ಸರಕಾರದೊಡನೆ ವ್ಯವಹರಿಸಿ ಸದರಿ ಯಾತ ನೀರಾವರಿ ಯೋಜನೆ ಗಳಿಗೆ ಯಾವತ್ತು ನೀರು ದೊರಕುವಹಾಗೆ ಮಹಾರಾಷ್ಟ್ರ ಸರಕಾರಕ್ಕೆ ಆಜ್ಞೆನೀಡುವಂತೆ ಕ್ರಮಕ್ಕೈಕೊಳ್ಳಲು ಈ ಸಭೆಯವರು ಸರಕಾರದವರಿಗೆ ಶಿಫಾರಸು ಮಾಡುತ್ತಾರೆ.

ಉಪಾಧ್ಯಕ್ಷರಂ: ನಿರ್ಣಯವನ್ನು ಮಂಡಿಸಲಾಗಿದೆ.

ಭೀಮಾನದಿಗೆ ಉಜನಿ ಹತ್ತಿರ ಅಡ್ಡಲಾಗಿ ಸೇತುವೆಯನ್ನು ಮಹಾರಾಷ್ಟ್ರ ಸರ್ಕಾರದವರಂ ನಿರ್ಮಿಸಿರುವುದರಿಂದ ಇಂಡಿ, ಸಿಂದಗಿ ತಾಲ್ಲೂಕಂಗಳಲ್ಲಿ ಬೀಮಾನದಿಗಿಂಂಟ ಪೂರ್ತಿಯಾಗಿರುವ ಮತ್ತೆ, ಪೂರ್ತಿ ಆಗದೇ ಇರುವ ಯಾತ ನೀರಾವರಿ ಯೋಜನೆಗಳು ಪೂರ್ತಿ ನಿಷ್ಪ್ರಯೋಜಕವಾಗುತ್ತಿದೆ ಅದರ ಬಗ್ಗೆ ಸರಕಾರವು ತೀವ್ರ ಕ್ರಮ ಕೈಗೊಳ್ಳುವುದರ ಜೊತೆಗೆ ಕೇಂದ್ರ ಸರಕಾರದೊಡನೆ ವ್ಯವಹರಿಸಿ ಸದರಿ ಯಾತ ನೀರಾವರಿ ಯೋಜನೆಗಳಿಗೆ ಯಾವತ್ತು ನೀರು ಬೊರಕುವಹಾಗೆ ಮಹಾರಾಷ್ಟ್ರ ಸರಕಾರಕ್ಕೆ ಆಜ್ಞೆವೀಯುವಂತೆ ಕ್ರಮ ಕೈಕೊಳ್ಳಲು ಈ ಸಭೆಯವರು ಸರಕಾರದವರಿಗೆ ಶಿಫರಸಂ ಮಾಡುತ್ತಾರೆ.

It can be taken up next time

Now the House stands adjourned to meet on Monday at 1 P. M.

The house adjourned at Ten Minutes past One of the Clock to meet again at One of the Clock on Monday, the 9th February, 1976